# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 855 |
| 02. ಮಾನ್ಯ ಸದಸ್ಯರ ಹೆಸರು | : | ಶ್ರೀ.ಕೆ.ಪ್ರತಾಪ್ ಸಿಂಹ ನಾಯಕ್.ಕೆ.<br>(ವಿಧಾನಸಭೆಯಿಂದ ಚುನಾಯಿತರಾದವರು) |
| 03. ಉತ್ತರಿಸುವ ದಿನಾಂಕ | : | 22.02.2024 |
| 04. ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ವರ್ಷದಿಂದ ವರ್ಷಕ್ಕೆ ಮಹಿಳೆಯರ ವಿರುದ್ದದ ದೌರ್ಜನ್ಯ ಪ್ರಕರಣಗಳು ಸತತವಾಗಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>ಬೆಂಗಳೂರು ನಗರದಲ್ಲಿ ಕಳೆದ 03 ವರ್ಷಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ದಾಖಲಾದ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ. |
| ಆ) | ಬಂದಿದ್ದಲ್ಲಿ ಕಳೆದ 3 ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ದಾಖಲಾದ ಮಹಿಳೆಯರ ವಿರುದ್ಧ ದೌರ್ಜನ್ಯ ಪ್ರಕರಣಗಳು ಎಷ್ಟು; | (see table below) |

| SL. NO. | Heads of Crime | 2021 | 2022 | 2023 |
|---|---|---|---|---|
| 1 | Rape(376 IPC) | 116 | 152 | 176 |
| 2 | Molestation (354 IPC) | 573 | 731 | 1135 |
| 3 | Insulting Modesty of Women (294 & 509 IPC) | 19 | 29 | 60 |
| 4 | Dowry Death (304(B) IPC) | 26 | 29 | 25 |
| 5 | Cruelty By Husband & Relatives in Law (498(A) IPC) | 422 | 580 | 696 |
| 6 | Immoral Trafficking Act | 129 | 155 | 161 |
| 7 | Dowry Prohibition Act | 735 | 954 | 1007 |
| | **TOTAL** | **2020** | **2630** | **3260** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ಮಹಿಳಾ ಸುರಕ್ಷತೆ ಸಲುವಾಗಿ **"ಸೇಫ್ ಸಿಟಿ ಯೋಜನೆ"** ಯನ್ನು ಬೆಂಗಳೂರಿನಲ್ಲಿ ಈಗಾಗಲೇ ಸಂಪೂರ್ಣವಾಗಿ ಅನುಷ್ಠಾನ ಗೊಳಿಸಲಾಗಿದೆಯೇ; | ಸೇಫ್ ಸಿಟಿ ಯೋಜನೆಯ ಭಾಗವಾಗಿ ಬೆಂಗಳೂರು ನಗರದಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>➢ **ಸಿಸಿಟಿವಿ ಕ್ಯಾಮೆರಾ** : ಮಹಿಳೆಯರ ಸುರಕ್ಷತೆಗಾಗಿ ನಗರದಾದ್ಯಂತ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದ್ದು ಈ ಯೋಜನೆಯ ಫೇಸ್-1 ಹಂತದ ಅನುಷ್ಠಾನ ಪೂರ್ಣಗೊಂಡಿದ್ದು ಫೇಸ್-2 ಮತ್ತು ಫೇಸ್-3 ನೇ ಹಂತದ ಅನುಷ್ಠಾನದ ಕಾರ್ಯ ಪ್ರಗತಿಯಲ್ಲಿದೆ.<br>➢ **ರಾಣಿ ಚನ್ನಮ್ಮ ಪಡೆ** : 'ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ವತಿಯಿಂದ ಮಹಿಳಾ ಪೊಲೀಸ್ ಸಿಬ್ಬಂದಿಗಳ 4 ತಂಡಗಳಿಗೆ ಸ್ವ ರಕ್ಷಣೆ ತರಬೇತಿ ನೀಡಲಾಗಿದೆ. 5 ಮತ್ತು 6ನೇ ತಂಡದ ತರಬೇತಿಯು ದಿ: 29.01.2024 ರಿಂದ ಪ್ರಾರಂಭಗೊಂಡಿದೆ.<br>➢ **ಜಾಗೃತಿ ಅಭಿಯಾನ**: NLSIU, NIMHANS ಸಂಸ್ಥೆಗಳ ವತಿಯಿಂದ ಸಂಸ್ಥೆಯ ವತಿಯಿಂದ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ, ಸಾರ್ವಜನಿಕರಿಗೆ ಶಾಲಾ ಮತ್ತು ಕಾಲೇಜು ಮಕ್ಕಳಿಗೆ ಕಾರಾಗೃಹದಲ್ಲಿರುವ ಖೈದಿಗಳಿಗೆ ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಮಕ್ಕಳಿಗೆ ಲಿಂಗ ಸಂವೇದನೆ, ಲಿಂಗಾಧಾರಿತ ಹಿಂಸಾಚಾರ ಕುರಿತು ಮಹಿಳೆಯರು ಮಕ್ಕಳ ಸುರಕ್ಷತೆ ಬಗ್ಗೆ ಜಾಗೃತಿ |

| | | |
|---|---|---|
| | | ಮೂಡಿಸುವ ಕಾರ್ಯಕ್ರಮಗಳು ಪ್ರಗತಿಯಲ್ಲಿವೆ.<br>➢ **ಸಿಸಿಆರ್‌ಯು** : ನಗರದ ಎಂಟು ಪ್ರಮುಖ ಆಸ್ಪತ್ರೆಗಳಲ್ಲಿ ಕ್ರಿಟಿಕಲ್ ಕೇರ್ ರೆಸ್ಪಾನ್ಸ್ ಯೂನಿಟ್‌ಗಳನ್ನು ತೆರೆದು ಶೋಷಣೆಗೊಳಗಾದ ಮಹಿಳೆಯುರು ಮತ್ತು ಹೆಣ್ಣು ಮಕ್ಕಳಿಗೆ ಉತ್ತಮ ರೀತಿಯಲ್ಲಿ ಸಮಾಲೋಚನೆ ಒದಗಿಸಲಾಗಿರುತ್ತದೆ. |
| ಈ) | ಸದರಿ ಯೋಜನೆಯಡಿ ಮಹಿಳೆಯರ ಸುರಕ್ಷತೆ ಹಾಗೂ ರಕ್ಷಣೆಗಾಗಿ ಯಾವೆಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ? (ವಿವರ ನೀಡುವುದು) | **"ಸೇಫ್ ಸಿಟಿ ಯೋಜನೆ" ಯಡಿಯಲ್ಲಿ ಮಹಿಳೆಯರ ಸುರಕ್ಷತೆ ಹಾಗೂ ರಕ್ಷಣೆಗಾಗಿ ಕೈಗೊಂಡ ಕ್ರಮಗಳ ವಿವರಗಳು ಈ ಕೆಳಕಂಡಂತಿದೆ:**<br>• ಮೆ.ಹನಿವೆಲ್ ಸಂಸ್ಥೆವತಿಯಿಂದ ಒಟ್ಟು ರೂ.496.57 ಕೋಟಿ ವೆಚ್ಚದಲ್ಲಿ ನಗರದಾದ್ಯಂತ ಒಟ್ಟು 7500 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.<br>• ಕಮಾಂಡ್ ಸೆಂಟರ್ – ನಗರದಾದ್ಯಂತ 3000 ಸ್ಥಳಗಳಲ್ಲಿ ಅಳವಡಿಸಿರುವ ಒಟ್ಟು 7500 ಕ್ಯಾಮೆರಾಗಳ ದೃಶ್ಯಾವಳಿಗಳನ್ನು ವೀಕ್ಷಿಸುವ ಸೌಲಭ್ಯ ಕಲ್ಪಿಸಲಾಗಿದೆ.<br>• ಜನನಿಬಿಡ ಪ್ರದೇಶ ಹಾಗೂ ಬಂದೋಬಸ್ತ್ ಸ್ಥಳಗಳನ್ನು ನಿಗಾ ಇಡಲು ಒಂದು ಅತ್ಯಾಧುನಿಕ ಮೊಬೈಲ್ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ವಾಹನವನ್ನು ಬಳಸಲಾಗುತ್ತಿದೆ.<br>• ಬೆಂಗಳೂರು ನಗರದ ಎಲ್ಲಾ ಕಾನೂನು ಮತ್ತು ಸುವ್ಯವಸ್ಥೆಯ ಡಿಸಿಪಿ ರವರುಗಳ ಕಛೇರಿ ಮತ್ತು 111 ಪೊಲೀಸ್ ಠಾಣೆಗಳಿಗೆ ಕ್ಯಾಮೆರಾಗಳ ದೃಶ್ಯಾವಳಿಗಳ ನೇರ ವೀಕ್ಷಣೆಗೆ ಸೌಲಭ್ಯ ಕಲ್ಪಿಸಲಾಗಿದೆ.<br>• ಬೆಂಗಳೂರು ನಗರದಾದ್ಯಂತ ಆಯ್ದ 50 ಸ್ಥಳಗಳಲ್ಲಿ ಸೇಫ್ಟಿ ಐಲ್ಯಾಂಡ್‌ಗಳನ್ನು ಸ್ಥಾಪಿಸಲಾಗಿದೆ.<br>• ಬೆಂಗಳೂರು ನಗರದಾದ್ಯಂತ ಸಾಮಾನ್ಯ ಕಾನೂನು ಸುವ್ಯವಸ್ಥೆ ಮೇಲೆ ನಿಗಾವಹಿಸಲು 10 ಡ್ರೋನ್‌ಗಳನ್ನು ಸೇರ್ಪಡೆಗೊಳಿಸಲಾಗಿದೆ.<br>• 560 ಬಾಡಿವೋರ್ನ್ ಕ್ಯಾಮೆರಾಗಳನ್ನು ಖರೀದಿಸಿ ನಿಯೋಜಿಸಲಾಗಿದೆ.<br>• ನಿರ್ಭಯ ಕೇಂದ್ರ (Integrated Support Centre for Women & Children) ಇಲ್ಲಿ ಶೋಷಣೆಗೊಳಗಾದ ಮಹಿಳೆ ಮತ್ತು ಮಕ್ಕಳಿಗೆ ಒಂದೇ ಸೂರಿನಡಿಯಲ್ಲಿ ವೈದ್ಯಕೀಯ ಚಿಕಿತ್ಸೆ, ಆಪ್ತ ಸಮಾಲೋಚನೆ, ಕಾನೂನು ನೆರವು, ವಿಡಿಯೋ ಕಾನ್‌ಫರೆನ್ಸ್ ಮೂಲಕ ಕಲಂ–164 ಸಿಆರ್‌ಪಿಸಿ ಅಡಿಯಲ್ಲಿ ಮಾನ್ಯ ನ್ಯಾಯಾಧೀಶರ ಮುಂದೆ ನೀಡುವ ಹೇಳಿಕೆಯನ್ನು ರೆಕಾರ್ಡ್ ಮಾಡುವ ಸೇವೆ, ಇತ್ಯಾದಿ ಸೇವೆಗಳನ್ನು ಒದಗಿಸುವುದು ಇದರ ಉದ್ದೇಶವಾಗಿದೆ.<br>• ಶೋಷಣೆಗೊಳಗಾದ ಮಹಿಳೆಯರಿಗೆ ಆಪ್ತ ಸಮಾಲೋಚನೆಯೊಂದಿಗೆ ಪ್ರಥಮ ವೈದ್ಯಕೀಯ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ನಗರದ 08 ಪ್ರಮುಖ ಸರ್ಕಾರಿ ಆಸ್ಪತ್ರೆಗಳಾದ ಬೌರಿಂಗ್, ವಾಣಿವಿಲಾಸ, ವಿಕ್ಟೋರಿಯಾ, ಕೆ.ಸಿ ಜನರಲ್, ಸಿ.ವಿ. ರಾಮನ್ ಜನರಲ್, ಜಯನಗರ ಜನರಲ್, ಇಎಸ್‌ಐ ರಾಜಾಜಿನಗರ ಹಾಗೂ ಯಲಹಂಕ ಜನರಲ್ ಆಸ್ಪತ್ರೆಗಳಲ್ಲಿ ಸಿ.ಸಿ.ಆರ್.ಯು (Critical Care Response Unit) ತೆರೆಯಲಾಗಿದೆ.<br>• 08 ಫೊರೆನ್ಸಿಕ್ ವಾಹನಗಳನ್ನು ಖರೀದಿಸಲಾಗಿದ್ದು, ಅಪರಾಧ ಕೃತ್ಯ ನಡೆದ ಸ್ಥಳಗಳಿಗೆ ಸದರಿ ಫೊರೆನ್ಸಿಕ್ ವಾಹನಗಳು ತಜ್ಞರೊಂದಿಗೆ ಕೊಡಲೇ ತಲುಪಿ ಸಾಕ್ಷ್ಯ ಸಂಗ್ರಹಣೆ ಮಾಡಿ ತಜ್ಞರ ಅಭಿಪ್ರಾಯ ವರದಿಯನ್ನು ಮಾನ್ಯ ನ್ಯಾಯಲಯಕ್ಕೆ ತಲುಪಿಸಲು ಸಹಕಾರಿಯಾಗುತ್ತದೆ.<br>• ನಗರದ ಮಹಿಳಾ ಪೊಲೀಸ್ ಸಿಬ್ಬಂದಿಗಳಿಗೆ ರಾಣಿ ಚನ್ನಮ್ಮ |

| | | |
|---|---|---|
| | | ಪಡೆಯನ್ನು ರಚಿಸಲಾಗಿದ್ದು, ಸದರಿ ಪಡೆಯಲ್ಲಿನ ಮಹಿಳಾ ಪೊಲೀಸ್ ಸಿಬ್ಬಂದಿಗಳಿಗೆ "ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ" ವತಿಯಿಂದ ಸ್ವರಕ್ಷಣಾ ತರಬೇತಿಯನ್ನು ನೀಡಲಾಗುತ್ತಿದ್ದು, ತರಬೇತಿ ಪಡೆದ ಮಹಿಳಾ ಪೊಲೀಸ್ ಸಿಬ್ಬಂದಿಗಳು ನಗರದ ಶಾಲೆ ಮತ್ತು ಕಾಲೇಜುಗಳಲ್ಲಿನ ವಿದ್ಯಾರ್ಥಿನಿಯರಿಗೆ ಸ್ವರಕ್ಷಣಾ ತರಭೇತಿ ನೀಡುತ್ತಾರೆ ಮತ್ತು ಠಾಣಾ ವ್ಯಾಪ್ತಿಯಲ್ಲಿ ಮಹಿಳೆಯರ ತೊಂದರೆಗಳಿಗೆ ಸ್ಪಂದಿಸಲಾಗುತ್ತಿದೆ. ಸದರಿ ರಾಣಿ ಚನ್ನಮ್ಮ ಪಡೆಯ ಕಾರ್ಯ ನಿರ್ವಹಣೆಗೆ ಒಟ್ಟು 448 ಸಂಖ್ಯೆಯ ದ್ವಿಚಕ್ರ ವಾಹನಗಳು, 224 ಸಂಖ್ಯೆಯ ನಾಲ್ಕು ಚಕ್ರದ ವಾಹನಗಳು 224 ಸಂಖ್ಯೆಯ ಕಂಪ್ಯೂಟರ್ ಮತ್ತು 112 ಸಂಖ್ಯೆಯ ಪ್ರಿಂಟರ್‌ಗಳನ್ನು ಒದಗಿಸಲಾಗಿದೆ.<br>• **NLSIU, NIMHANS** ಸಂಸ್ಥೆಗಳ ವತಿಯಿಂದ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ, ಸಾರ್ವಜನಿಕರಿಗೆ, ಶಾಲಾ ಮತ್ತು ಕಾಲೇಜು ಮಕ್ಕಳಿಗೆ, ಕಾರಾಗೃಹದಲ್ಲಿರುವ ಖೈದಿಗಳಿಗೆ ಹಾಗೂ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ, ಲಿಂಗ ಸಂವೇದನೆ, ಲಿಂಗಾಧಾರಿತ ಹಿಂಸಾಚಾರದ ಕುರಿತು ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>• ನಗರದಾದ್ಯಂತ ಒಟ್ಟು 60 ವುಮೆನ್ ಔಟ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು, ದಿನದ 24 ಗಂಟೆ ಕಾರ್ಯನಿರ್ವಹಿಸಲು ಪಾಳಿಯ ವ್ಯವಸ್ಥೆಯಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಶಾಲೆ–ಕಾಲೇಜು, ಬಸ್‌ಸ್ಟಾಂಡ್, ರೈಲ್ವೆ ನಿಲ್ದಾಣ, ಪಾರ್ಕ್, ಮಾಲ್ ಇತ್ಯಾದಿ ಸೂಕ್ಷ್ಮ ಸ್ಥಳಗಳಲ್ಲಿ ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಸದರಿ ಔಟ್‌ಪೋಸ್ಟ್‌ಗಳನ್ನು ಅಳವಡಿಸುವ ಮೂಲಕ ಸಾರ್ವಜನಿಕವಾಗಿ ಮಹಿಳೆಯರಿಗೆ ಭದ್ರತೆ ಒದಗಿಸುವ ವಿಶ್ವಾಸವನ್ನು ಮೂಡಿಸುವ ಜೊತೆಗೆ ದೌರ್ಜನ್ಯಕ್ಕೊಳಗಾದ ಮಹಿಳೆ/ಮಕ್ಕಳಿಗೆ ಕೂಡಲೇ ಪೊಲೀಸ್ ನೆರವನ್ನು ಒದಗಿಸುವ ಉದ್ದೇಶವನ್ನು ಗುರಿಯಾಗಿಟ್ಟುಕೊಳ್ಳಲಾಗಿದೆ. |

HD 8 SDN 2024

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು